# ಅಂಚೆ ಮತ್ತು ತೆರಪಿನ ಶಿಕ್ಷಣ

# ಪ್ರಥಮ ಬಿ.ಎ. / ಬಿ.ಕಾಂ./ಬಿ.ಎಸ್ಸಿ ಪದವಿ ಪರೀಕ್ಷೆ,

# ಆಗಸ್ಟ್/ ಸೆಪ್ಟೆಂಬರ್ 2010

## ಕನ್ನಡಭಾಷಾ ಪತ್ರಿಕೆ - ೧

(ಪಠ್ಯಗಳು : ಹೊಸಗನ್ನಡ ಕವಿತೆಗಳು, ಶೂದ್ರತಪಸ್ವಿ, ಬೆಟ್ಟದಜೀವ, ಆಡಳಿತ ಕನ್ನಡ)

(ಹೊಸಬರಿಗೆ)

ಅವಧಿ : *3* ಗಂಟೆಗಳು.] [ಅಂಕಗಳು: *80*

1. ಅ) ಒಂದರ ಭಾವಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ. 7 ಅಂಕಗಳು

೧) ಚಳಿಗೆ ನಡಗಲು ಮರುಕದಿಂದ
ಕೆಳಗೆ ಕಂಬಳಿ ಹಾಸಿ ಜೊತೆಯೊಳು
ಚೆಲುವು ಮರಿಗೂ ತಾಣವಿತ್ತೆನು
ಒಲುಮೆ ಬೆಸೆಯಿತು ಇಬ್ಬರ.

೨) ಪಾಲ್ ಪೂಜ್ಯಮಾದೊಡಂ
ಜೀವಾತುವಾದೊಡಂ
ತ್ಯಾಜ್ಯಮಾ ನಾಯ ಪಾಲ್
ನಾಯ ಪಾಲ್ಗೆಣೆ ಶೂದ್ರನ ತಪಂ.

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. 4 ಅಂಕಗಳು

ಕಜ್ಜ, ಲಯ, ಅಂಬುಧಿ, ತರು, ಹುಯಿಲು, ಉಸುರು, ದಶಗ್ರೀವಾರಿ, ಪಾರ್ವ, ಪೂಣ್ಕೆ, ತೆಂಕಣ, ಪಾಂಗು, ಬಿಜ್ಜೆ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. 4 ಅಂಕಗಳು

ಮದಲಿಂಗ, ವೃಕ್ಷಭೈರವ, ಕುರುಬಗೌಡ 4 ಅಂಕಗಳು

2. ಐದಕ್ಕೆ ಸಂದರ್ಭಸೂಚಿಸಿ ಟಿಪ್ಪಣಿ ಬರೆಯಿರಿ. $3 \times 5 = 15$ ಅಂಕಗಳು

೧) ಅಕ್ಕಯ್ಯ ನೀನು ನಮ್ಮನು ಬಿಟ್ಟು ಹೋಗುವರೆ ಮನಸು ಬರುವುದೆ

೨) ಜಡಿಮಳೆ ಸುರಿವೋಲ್, ಬಿರುಮಳೆ ಬರುವೋಲ್

೩) ಕರುಣೆ ಒಲುಮೆಗೆ ಸಾಟಿಯೆ

೪) ಹಳೆಯ ಬಾಗಿಲಿಗೆ ಹೊಸ ತೋರಣವ ಕಟ್ಬೋಣ

೫) ಕುರುಡಿ ನಿನ್ನ ಬೈಮಂ ಮರಳಿ ನಾನೆಂತು ಕಾಣ್ಬೆನ್

೬) ನೀನ್ ವಿಚಾರಿಸಲ್ ದುಃಖಮೆಂಬುದುಂಟೆ ?

೭) ಸೀತೆಯನ್ ಅರಣ್ಯಕೆ ವಿಸರ್ಜಿಸಿದೀತಂಗೆ ಅರಣ್ಯಮೆ ಸೀತೆಯಾಗಿರ್ಪಳ್

೮) ಸಾಲದೇನಾ ಶೂದ್ರನ ತಪಕೆ ಮುನಿದ ಧರ್ಮಶಾಪಂ |

ಮುಂದುವರೆದಿದೆ.... 2

3. ನಿಜವಾದ ಪ್ರೀತಿ, ಕರುಣೆ - ಇವುಗಳ ನೆಲೆ ಬೆಲೆಗಳನ್ನು 'ನನ್ನ ನಾಯಿ' ಕವನ ಹೇಗೆ ಪರೀಕ್ಷಿಸುತ್ತದೆ. ವಿವರಿಸಿ.

**ಅಥವಾ**

ಪ್ರೇಮದ ದುರಂತ ಕಥೆಯ ಪ್ರತಿರೂಪದಂತಿದೆ 'ಮದಲಿಂಗನ ಕಣಿವೆ' ಚರ್ಚಿಸಿ. 10 ಅಂಕಗಳು

4. ರಾಮ-ಬ್ರಾಹ್ಮಣರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

**ಅಥವಾ**

ವೃಷಭೈರವ ಮತ್ತು ಮೃತ್ಯುವಿನ ಮಧ್ಯೆ ನಡೆಯುವ ಸಂಭಾಷಣೆಯ ಮಹತ್ವವನ್ನು ವಿವರಿಸಿ. 10 ಅಂಕಗಳು

5. ೧) ಗೋಪಾಲಯ್ಯನ ಬಾಲ್ಯ ಮತ್ತು ಕಾದಂಬರಿಯಲ್ಲಿ ಅವರ ಪಾತ್ರ ಚಿತ್ರಣವನ್ನು ನಿರೂಪಿಸಿ.

**ಅಥವಾ**

ಗೋಪಾಲಯ್ಯ ಮತ್ತು ಶಂಕರಮ್ಮನವರ ಆದರ್ಶ ದಾಂಪತ್ಯವನ್ನು ವಿವರಿಸಿ. 10 ಅಂಕಗಳು

೨) ಕಾದಂಬರಿಯಲ್ಲಿ ನಿರೂಪಕರ ಪಾತ್ರದ ಮಹತ್ವವನ್ನು ಚಿತ್ರಿಸಿ.

**ಅಥವಾ**

ಶಂಕರಮ್ಮ, ಶಂಭೂಭಟ್ಟ, ನಾರಾಯಣ - ಇವರಲ್ಲಿ ಇಬ್ಬರ ಪಾತ್ರ ಪರಿಚಯಮಾಡಿಕೊಡಿ. 10 ಅಂಕಗಳು

6. ಅ) ಸುತ್ತೋಲೆ ಎಂದರೇನು ? 2 ಅಂಕಗಳು

ಆ) ಸರ್ಕಾರಿ ಪತ್ರದ ವಿವಿಧ ಅಂಗಗಳನ್ನು ಸ್ಥೂಲವಾಗಿ ವಿವರಿಸಿ. 4 ಅಂಕಗಳು

ಇ) ಅರ್ಜಿ ಎಂದರೇನು ? ಮನೆಯಲ್ಲಿನ ಕಾರ್ಯಕ್ರಮವನ್ನು ತಿಳಿಸಿ, ರಜೆ ಕೋರಿ ಮೇಲಾಧಿಕಾರಿಗಳಿಗೆ ಅರ್ಜಿಯೊಂದನ್ನು ಬರೆಯಿರಿ. 4 ಅಂಕಗಳು

* ** *

ಮುಂದುವರೆದಿದೆ.... 3